ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಾಗರ

ಸಿ.ಸಿ.ನಂ.2398-2024.

**ಪಿರ್ಯಾದಿ** :- ಆನಂದಪುರ ಪೋಲೀಸ್ ಠಾಣೆ,

-ವಿರುದ್ದ-

**ಆರೋಪಿ** :- ಸುನೀಲ್ ತಟೆ ಸಾಬ್ ಮಾಯಣ್ಣ
ಬಿನ್ ತಟೆ ಸಾಬ್ ಮಾಯಣ್ಣ
ವಯಸ್ಸು ಸುಮಾರು 30 ವರ್ಷ,
ವಾಸಃ ಕಡಕಲತ್ತಿ ಗ್ರಾಮ, ಚಿಕ್ಕೋಡಿ ತಾಲ್ಲೂಕು,
ಬೆಳಗಾವಿ ಜಿಲ್ಲೆ.

ಭಾರತ ದಂಡ ಪಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ 1ಃ ನೀವು ಈ ಪ್ರಕರಣದಲ್ಲಿ ಅಭಿಯೋಜನೆ ಪರ ಮಾಡಿರುವ ಸಾಕ್ಷಿಗಳ ಸಾಕ್ಷ್ಯ ಕೇಳಿದ್ದೀರಾ?

ಉತ್ತರಃ

ಪ್ರಶ್ನೆ 2ಃ ಫ್ರಾ.ಸಾ.1 ಖಲಂದರ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತನಗೆ ಚಾಸಾ 2 ಮತ್ತು ಅಬ್ದುಲ್ ಹುಸೇನ್ ರವರ ಪರಿಚಯ ಇರುತ್ತದೆ. ದಿನಾಂಕ 27-4-2024 ರಂದು ಮಧ್ಯಹ್ನ ಸುಮಾರು 2-45 ಗಂಟೆ ಸಮಯದಲ್ಲಿ ಊಟ ಮಾಡಲು ಕೆಲಸದ ಸ್ಥಳದಿಂದ ತಮ್ಮ ಮನೆಗೆ ಯಡೇಹಳ್ಳಿ ಕೆರೆ ಬಳಿ ಸಾಗರ -ಶಿವಮೊಗ್ಗ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಜೆಸಿಬಿ ವಾಹನವು ಶಿವಮೊಗ್ಗದ ಕಡಯಿಂದ ಬಂದು ಸಾಗರದ ಕಡೆಯಿಂದ ಬರುತ್ತಿದ್ದ ಒಂದು ದ್ವಿಚಕ್ರವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಆಗ ಸದರಿ ದ್ಚಿಚಕ್ರ ವಾಹನ ನನಗೆ ಬಂದು ಡಿಕ್ಕಿಪಡಿಸಿರುತ್ತದೆ. ಆಗ ತನ್ನ ಕೈ ಮತ್ತು ಕಾಲಿಗೆ ಹೊಡತ ಆಗಿರುತ್ತದೆ. ಸದರಿ ದ್ವಿಚಕ್ರ ವಾಹನದಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಸದರಿ ವಾಹನ ಚಾಲಕನ ಹೆಸರು ಹುಸೇನ್ ಆಗಿರುತ್ತದೆ ಆತನ ಹೊಟ್ಟೆಗೆ ತೀವ್ರ ಸ್ವರೂಪದ ಗಾಯಳುಗಳಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ ಹಿಂಬದಿ ಸವಾರನಾದ ಚಾಸಾ2 ರವರಿಗೆ ಗಾಯವಾಗಿರುತ್ತದೆ. ಸ್ಥಳಕ್ಕೆ ಸಾರ್ವಜನಿಕರು ಬಂದು ತಮ್ಮನ್ನು ಆನಂದಪುರದಿಂದ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ನಂತರ ಶಿವಮೊಗ್ಗದ ಮೆಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ದಿನ ಜೆಸಿಬಿ ವಾಹನದ ಚಾಲಕ ಅತಿ ವೇಗದಲ್ಲಿ ಚಲಿಸುತ್ತಿದ್ದ. ಸದರಿ ಜೆಸಿಬಿ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 3ಃ ಫ್ರಾ.ಸಾ.2 ಅನ್ಸರ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತಾನು ದಿನಾಂಕ 27-4-2024 ರಂದು ಆನಂದಪುರದಲ್ಲಿ ಇದ್ದಾಗ ತನ್ನ ಅಣ್ಣನ ಮಗಳು ವಾಸಿಂ ಕರೆ ಮಾಡಿ ಆನಂದಪುರದ ಗೌರಿ ಕೆರೆ ಬಳಿ ತನ್ನ ಅಕ್ಕನ ಮಗನಾದ ಅಬ್ದುಲ್ ಹುಸೇನ್ ರವರಿಗೆ ಒಂದು ಜೆಸಿಬಿ ಅಪಘಾತಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ ಕೂಡಲೇ ತಾನು ಸ್ಥಳಕ್ಕೆ ಹೋಗಿ ನೋಡಲಾಗಿ ಜೆಸಿಬಿ ಯ ಮುಂದಿನ ಬಕೇಟ್ ನಿಂದ ಸದರಿ ಅಬ್ದುಲ್ ಹುಸೇನ್ ರವರಿಗೆ ಹೊಟ್ಟೆಗೆ ತೀವ್ರ ಸ್ವರೂಪದ ಗಾಯವಾಗಿದ್ದು ಆತನನ್ನು ಅಂಬುಲೆನ್ಸ ನಲ್ಲಿ ಮಲಗಿಸಿರುವುದು

ಕಂಡು ಬಂದಿರುತ್ತದೆ. ಅವರನ್ನು ಆರೈಕೆ ಆಸ್ಪತ್ರೆಗೆ ಕರೆದು ಕೊಂಡು ಹೋಗುವಾಗ ಮಾರ್ಗ ಮಧ್ಯ ಆತನ ಮೃತಪಟ್ಟಿರುತ್ತಾನೆ. ಆತನ ಶವವನ್ನು ಸರಕಾರಿ ಆಸ್ಪತ್ರೆ ಶವಾಗಾರಕ್ಕೆ ತರಲಾಗಿರುತ್ತದೆ. ತಾನು ಅಪಘಾತದ ಬಗ್ಗೆ ವಿಚಾರಿಸಲಾಗಿ ಜೆಸಿಬಿಯ ಚಾಲಕ ಸುನೀಲ್ ರವರು ತನ್ನ ವಾಹನವನ್ನು ಅಡ್ಡವಾಗಿ ಚಲಿಸಿ ಅಬ್ದುಲ್ ಹುಸೇನ್ ರವರು ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದು ತಿಳಿದು ಬಂದಿರುತ್ತದೆ ಅದರಂತೆ ತಾನು ಆನಂದಪುರ ಠಾಣೆಗೆ ಹೋಗಿ ಸದರಿ ಚಾಲಕನ ವಿರುದ್ಧ ದೂರು ದಾಖಲು ಮಾಡಿರುತ್ತೇನೆ. ಜೆಸಿಬಿ ವಾನದ ನಂಬರು ಕಂಡು ಬಂದಿರುವುದಿಲ್ಲ. ಠಾಣೆಯಲ್ಲಿ ಜೇಸಿಬಿ ವಾಹನದ ನಂಬರನ್ನು ತಿಳಿದುಕೊಂಡಿರುತ್ತೇನೆ. ಸದರಿ ವಾಹನದ ಹಿಂಬದಿ ಸವಾರನಾದ ಇಬ್ರಾಹಿಂ ರವರಿಗ ಕಾಲುನಲ್ಲಿ ಸ್ವಲ್ಪ ಗಾಯಗಳಾಗಿರುತ್ತದೆ. ಸದರಿ ಅಪಘಾತದಲ್ಲಿ ಪಾದಚಾರಿ ಖಲಂದರ್ ರವರಿಗೆ ಸಹ ಗಾಯಗಳು ಅಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಜೆಸಿಬಿ ದ್ವಿಚಕ್ರ ವಾಹನಕ್ಕೆ ಹೊಡೆದ ರಭಸಕ್ಕೆ ದ್ವಿಚಕ್ರ ವಾಹನ ಹೋಗಿ ಪಾದಚಾರಿಗೆ ಡಿಕ್ಕಿಪಡಿಸಿರುತ್ತದೆ ಆತನಿಗ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 4ಃ ಪ್ರಾ.ಸಾ.2 ಅನ್ಸರ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು, ದೂರು ನೀಡಿದ 4-5 ದಿನಗಳ ನಂತರ ಪೊಲೀಸರು ಘಟನ ಸ್ಥಳ ಕ್ಕೆ ಬಂದಿದ್ದು, ತಾನು ಸ್ಥಳ ತೋರಿಸಿ ಕೊಟ್ಟ ಮೇರೆಗೆ ಪೊಲೀಸರು ತನ್ನ ಚಾಸಾ 5 ಮತ್ತು 6 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ. ಸ್ಥಳ ನಕಾಶೆ ತಯಾರಿಸಿ ಭಾವ ಚಿತ್ರ ಪಡೆದಿರುತ್ತಾರೆ ನಂತರ ತಾನು ಠಾಣೆಗೆ ಹೋಗಿ ನೋಡಲಾಗಿ ಅಪಘಾತಪಡಿಸಿದ ಜೆಸಿಬಿ ಮತ್ತು ಇಡಾದ ದ್ವಿಚಕ್ರ ವಾಹನ ಕಂಡು ಬಂದಿರುತ್ತದೆ ಅವುಗಳನ್ನು ಸಹ ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡಿರುತ್ತಾರೆ ಮತ್ತು ಭಾವ ಚಿತ್ರ ಸಹ ತೆಗೆಯಲಾಗಿರುತ್ತದೆ ಆರೋಪಿಯನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆ ಅವರು ಈ ದಿನ ನ್ಯಾಯಾಲಯದ ಮುಂದಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 5ಃ ಪ್ರಾ.ಸಾ.3 ಜಬೀವುಲ್ಲಾ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ನಿಪಿ-4 ನ್ನು ತಾನು ಅಬ್ದುಲ್ ಹುಸೇನ್ ರವರಿಗೆ ಅಪಘಾತವಾದ ಬಗ್ಗೆ ಸಂಬಂಧಪಟ್ಟಂತೆ ಆನಂದಪುರದ ಗೌರಿಕೆರೆ ಬಳಿ ಚಾಸಾ 1 ರವರು ಅಪಘಾತ ಸ್ಥಳ ತೋರಿಸಿ ಕೊಟ್ಟ ಮೇರೆಗೆ ನನ್ನ ಹಾಗೂ ಚಾಸಾ 5 ರವರ ಸಮಕ್ಷಮ ಪೊಲೀಸರು ಪಂಚನಾಮೆ ಜರುಗಿಸಿ ಭಾವಚಿತ್ರ ಪಡೆದಿರುತ್ತಾರೆ ಮತ್ತು ನಕ್ಷೆ ತಯಾರಿಸಿರುತ್ತಾರೆ. ನಿಪಿ-6 ಕ್ಕೆ ತಾನು ಪೊಲೀಸ್ ಠಾಣೆಯಲ್ಲಿ ಅಪಘಾತಪಡಿಸಿದ ಜೆಸಿಬಿ ವಾಹನ ಮತ್ತು ಅಪಘಾತಕ್ಕೆ ಇಡಾದ ದ್ವಿಚಕ್ರ ವಾಹನವನ್ನು ಚಾಸಾ ರವರು ತೋರಿಸಿ ಕೊಟ್ಟ ಮೇರೆಗೆ ಪೊಲೀಸರು ಅಮಾನತ್ತುಪಡಿಸಿಕೂಂಡಾಗ ತಾನು ಮತ್ತು ಚಾಸಾ 5 ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತೇವೆ. ಘಟನ ಸ್ಥಳವನ್ನು ರಫೀಕ್ ರವರು ತೋರಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 6ಃ ಪ್ರಾ.ಸಾ.4 ಯುವರಾಜ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕಃ 27-04-*2024 ರಂದು ತಾನು ಠಾಣೆಯಲ್ಲಿ ಇರುವಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ಅವರಿಂದ ಗಣಕೀಕೃತ ದೂರನ್ನು ಪಡೆದುಕೊಂಡು ಠಾಣಾ ಗುನ್ನಾ ನಂ.86/2024 ರಂತೆ ಪ್ರಕರಣ ದಾಖಲು ಮಾಡಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಕರಣವು ಘೋರ ಅಪರಾಧವಾದ ಕಾರಣ ಕಡತವನ್ನು ಚಾಸಾ.22 ರವರಿಂದ ಮೌಖಿಕ

ಆದೇಶ ಪಡೆದುಕೊಂಡು ಆನಂದಪುರದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತ ಅಬ್ದುಲ್ ಹುಸೇನ್ ರವರಇ ಶವ ಪಂಚನಾಮೆಯನ್ನು ಚಾಸಾ 10 ರಿಂದ 12 ರವರ ಸಮಕ್ಷಮ ಜರುಗಿಸಿದ್ದು, ಮೃತನ ಶವ ತನಿಖೆ ವರದಿ ಜರುಗಿಸಬೇಕೆಂದು ವೈದ್ಯರಿಗೆ ಮನವಿ ಪತ್ರ ಸಲ್ಲಿಸಿ ಮೃತ ದೇಹವನ್ನು ಅವರ ಕುಟುಂಬಸ್ತರಿಗೆ ಒಪ್ಪಿಸಿರುತ್ತೇನೆ. ನಂತರ ದಿನಾಂಕಃ 29-04-2024 ರಂದು ಚಾಸಾ.1 ರವರು ಕೃತ್ಯ ನಡೆದ ಸ್ಥಳ ಪಂಚನಾಮೆ ಜರುಗಿಸಿ ಅಲ್ಲಿ ಕಚ್ಚಾ ನಕ್ಷೆ ಮತ್ತು ಭಾವ ಚಿತ್ರವನ್ನು ಪಡೆದು, ಸದರಿ ದಿನವೇ ಪೋಲೀಸ್ ಠಾಣಾ ಆವರಣದಲ್ಲಿ ಇದ್ದ ಅಪಘಾತಪಡಿಸಿದ ವಾಹನವಾದ ಜೆಸಿಬಿ ಮತ್ತು ಅಪಘಾತಕ್ಕೆ ಇಡಾದ ವಾಹನ ದ್ವಿ ಚಕ್ರವಾಹನದ ನಂಬರ್ ಕೆಎ15 ಇಜೆ 8262 ವಾಹನವನ್ನು ಸುಗಮ ಸಂಚಾರ ದೃಷ್ಟಿಯಿಂದ ಸ್ಥಳದಿಂದ ಬೇರ್ಪಡಿಸಿ, ಠಾಣಾ ಆವರಣದಲ್ಲಿ ಇರಿಸಿದ್ದು, ಜೆಸಿಬಿ ವಾಹನವನ್ನು ಮಾಲು ಪಟ್ಟಿ ನಂ.48/2024 ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕಕಕೊಂಡಿರುತ್ತೇನೆಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 7ಃ **ಪ್ರಾ.ಸಾ. 5 ವಾಸೀಂ ಅಕ್ರಮ್** ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಸುಮಾರು 2 ವರುಷಗಳ ಹಿಂದೆ ಮಧ್ಯಾಹ್ಞ 2-30 ಗಂಟೆಗೆ ತಾನು ಮನೆಯ ಬಳಿ ಇದ್ದಾಗ ತನ್ನ ಸ್ನೇಹಿತ ತನಗೆ ಕರೆ ಮಾಡಿ ತನ್ನ ಅತ್ತೆ ಮಗನಾದ ಅಬ್ದುಲ್ ಹುಸೇನ್ ಗೆ ಯೆಡಹಳ್ಳಿ ಕರೆಯ ಬಳಿ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕೂಡಲೆ ತಾನು ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ಜೆಸಿಬಿ ಯ ಮುಂಭಾಗದ ಬಕೇಟನ ಹಲ್ಲು ಸದರಿ ಹುಸೇನ್ ರವರ ಹೊಟ್ಟೆಗೇ ಚುಚ್ಚಿದ್ದು ಅತನ ಕರುಳು ಅಚೆ ಬಂದಿರುತ್ತದೆ. ಸದರಿ ಮಾಹಿತಿಯನ್ನು ನನ್ನ ಚಿಕ್ಕಪ್ಪನಿಗೆ ತಿಳಿವಿಸಿರುತ್ತೇನೆ. ಅಂಬುಲೆನ್ಸನ್ನು ಬರ ಮಾಡಿಕೊಂಡು ಆತನನ್ನು ಶಿವಮೊಗ್ಗ ದ ಅಸ್ಪತ್ರೆಗೆ ಕರೆದುಕೂಂಡು ಹೋಗುತ್ತಿದ್ದಾಗ ಆಯನೂರು ಬಳಿ ಆತ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ. ಜೆಸಿಬಿಯ ಚಾಲಕ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ ಎಂದು ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 8ಃ **ಪ್ರಾ.ಸಾ.6** ಮುಬಾರಕ್ ಬೇಗ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕಃ **27-04-2024** ರಂದು ತಾನು ಮತ್ತು ಅಬ್ದುಲ್ ಹುಸೇನ್ ರವರು ಕಣ್ಣೂರಿಂದ ಕೆಲಸ ಮುಗಿಸಿಕೊಂಡು ಬೈಕಿನಲ್ಲಿ ಕೆಎ-**15** ಇಜೆ **8262** ಬೈಕಿನಲ್ಲಿ ಮನೆಗೆ ಊಟ ಮಾಡಲು ಆನಂದಪುರದಿಂದ ಯಡೇಹಳ್ಳಿ ಕಡೆಗೆ ಹೋಗುವ ಎನ್.ಹೆಚ್. **69** ನಲ್ಲಿ ಹೋಗುತ್ತಿದ್ದಾಗ, ಕೆರೆ ಪಕ್ಕದಲ್ಲಿ ಅಡಿಕೆ ತೋಟದಿಂದ ತಪ್ಪು ದಾರಿಯಿಂದ ಕೆಳಗಿನಿಂದ ಜೆಸಿಬಿಯ ಬಕೇಟ್ ನ್ನು ಮೇಲಕ್ಕೆತ್ತಿಕೊಂಡು ಅತಿ ವೇಗದಿಂದ ಚಲಾಯಿಸಿಕೊಂಡು ಬಂದು ತಮ್ಮ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಬೈಕ್ ಸಮೇತ ತಾವು ಕೆಳಗೆ ಬಿದ್ದಿದ್ದು, ಜೆಸಿಬಿ ಬಕೇಟ್ ನಮ್ಮಿಬ್ಬರಿಗೂ ತಗುಲಿದ್ದು ತನಗೆ ಜೆಸಿಬಿ ಎದೆಭಾಗಕ್ಕೆ ತಾಗಿದ್ದು, ತಾನು ನೆಲಕ್ಕೆ ಬಿದ್ದಾಗ ತನ್ನ ತಲೆಯ ಹಿಂಭಾಗಕ್ಕೆ ಏಟಾಗಿತ್ತು ಹುಸೇನ್ ರವರಿಗೆ ಜೆಸಿಬಿ ಬಕೇಟಿನ ಹಲ್ಲು ತಾಗಿ ಆತನ ಹೊಟ್ಟೆಯ ಕರುಳುಗಳು ಹೊರಗೆ ಬಂದಿತ್ತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 9ಃ ಪ್ರಾ.ಸಾ.6 ಮುಬಾರಕ್ ಬೇಗ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು, ಅಪಘಾತದ ರಭಸಕ್ಕೆ ತಮ್ಮ ಬೈಕ್ ಹೋಗಿ ದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದ ಚಾಸಾ.3 ರವರಿಗೆ ಗುದ್ದಿರುತ್ತದೆ. ಚಾಸಾ.3 ರವರಿಗೆ ದೇಹದ ಎಲ್ಲಾ ಭಾಗಗಳಿಗೆ ಗಾಯಗಳಾಗಿದ್ದವು. ಜೆಸಿಬಿ ಸಂಖ್ಯೆ ಕೆಎ-23 ಆಗಿದ್ದು ಉಳಿದ ಸಂಖ್ಯೆಗಳು ತನಗೆ ಅಪಘಾತವು ಮಧ್ಯಾಹ್ನ 1-40 ಸಮಯಕ್ಕೆ ಆಗಿರುತ್ತದೆ. ಹುಸೇನ್ ರವರನ್ನು ಮೊದಲಿಗೆ ಆನಂದಪುರ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಪರೀಕ್ಷೆ ನಡೆಸಿ ಹೆಚ್ಚಿನ ಚಿಕಿತ್ಸೆಗಾಗಿ ಶಿವಮಾಗ್ಗದ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ರಸ್ತೆ ಮಧ್ಯದಲ್ಲಿ ಆತ ಮೃತಪಟ್ಟಿರುತ್ತಾನೆ. ಸದರಿ ಅಪಘಾತವು ಜೆಸಿಬಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ಆ ದಿನ ಜೆಸಿಬಿ ಚಲಾಯಿಸುತ್ತಿದ್ದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುತ್ತಾನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 10ಃ ಪ್ರಾ.ಸಾ.7 ನಾಗರಾಜು ಡಿ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ 30-4-2024 ರಂದು ಈ ಪ್ರಕರಣದ ಕಡತವನ್ನು ಚಾಸಾ 21 ರರಿಂದ ಪಡೆದು ತನಿಖೆಯನ್ನು ಮುಂದುವರೆಸಿ ದಿನಾಂಕ 1-5-2024 ರಂದು ಈ ಪ್ರಕರಣದ ಆರೋಪಿಯಾದ ಸುನೀಲ್ ರವರು ಖುದ್ದಾಗಿ ಠಾಣೆಗೆ ಹಾಜರಾಗಿದ್ದು ಅವರ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 20-5-2024 ರಂದು ಅಪಘಾತದಲ್ಲಿ ಭಾಗಿಯಾದ ಮೋಟಾರು ವೆಹಿಕಲ್ ಸಂಖ್ಯೆ ಕೆಎ-15 ಇಜಿ 8262 ನ್ನು ಮಾಲೀಕರಾದ ಮುಬಾರಕ್ ಬೇಗ್ ರವರಿಗೆ ಕಲಂ 133 ಎಂ.ವಿ ಆ್ಯಕ್ಟ ನಡಿ ನೋಟೀಸು ಜಾರಿ ಮಾಡಿರುತ್ತೇನೆ. ದಿನಾಂಕ 21-5-2024 ರಂದು ಅಪಘಾತಪಡಿಸಿದ ವಾಹನ ಸಂಖ್ಯೆ ಕೆ ಎ -23 ಪಿ 2498 ಜೆಸಿಬಿ ವಾಹನವನ್ನು ನ್ಯಾಯಾಲಯದ ಆದೇಶದಂತೆ ಪಂಚನಾಮೆ ಮೂಲಕ ಪಂಚರಾದ ಚಾಸಾ 8 ಮತ್ತು 9 ರವರ ಸಮಕ್ಷಮ ಆನಂದಪುರದ ಠಾಣಾ ಆವರಣದಲ್ಲಿ ಬೆಳಿಗ್ಗೆ 11 ರಿಂದ 11-50 ರವರೆಗೆ ಮಹಜರು ಕ್ರಮ ಜರುಗಿಸಿ ವಾಹನವನ್ನು ಮಾಲೀಕರಿಗೆ ಬಿಟ್ಟು ಕೊಟ್ಟಿರುತ್ತೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 11ಃ ಪ್ರಾ.ಸಾ.7 ನಾಗರಾಜು ಡಿ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 28-5-2024 ರಂದು ಅಪಘಾತಕ್ಕೆ ಒಳಗಾದ ವಾಹನ ಕೆಎ-15 ಇಜಿ 8268 ನ ಮಾಲೀಕರಿಂದ ಕಲಂ 133 ಐಎಂವಿ ಆ್ಯಕ್ಟ ನಡಿಯಲ್ಲಿ ನೀಡಿದ ನೋಟೀಸಿಗೆ ಉತ್ತರವನ್ನು ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿ ಕೊಂಡಿರುತ್ತೇನೆ. ನಂತರ ವಾಹನದ ದಾಖಲಾತಿಗಳನ್ನು ಪಡೆದು ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಮಾಲೀಕರ ವಶಕ್ಕೆ ಬಿಟ್ಟು ಕೊಟ್ಟಿರುತ್ತೇನೆ. ಅದೇ ದಿನ ಗಾಯಾಳುಗಳ ಗಾಯದ ಪ್ರಮಾಣಪತ್ರ ಪಡೆದು ಕಡತಕ್ಕೆ

ಅಳವಡಿಸಿಕೂಂಡಿರುತ್ತೇನೆ. ಮೃತನ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿ ಕೊಂಡಿರುತ್ತೇನೆ. ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಕಡತವನ್ನು ಪರಿಶೀಲಿಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 12ಃ ನಿಮ್ಮ ಪರ ಸಾಕ್ಷ್ಯ ಮಾಡಿಸುತ್ತೀರಾ?**

**ಉತ್ತರಃ**

**ಪ್ರಶ್ನೆ 13ಃ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯಾ?**

ಉತ್ತರಃ

(ದಿಃ 27/06/2026 ರಂದು ಮೇಲ್ಕಂಡ ಹೇಳಿಕೆಯು ಆರೋಪಿಯಿಂದ ನೀಡಲ್ಪಟ್ಟಿದ್ದು ನಿಜವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ .